ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಸೋಮವಾರ, ದಿನಾಂಕ : 07 ನೇ ಡಿಸೆಂಬರ್, 2020

ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ಹಾಸ್ಟೆಲ್‌ಗಳ ಬಗ್ಗೆ

ಶ್ರೀ ಪ್ರಕಾಶ್ ಕೆ. ರಾಥೋಡ್(ನಾಮನಿರ್ದೇಶನ ಹೊಂದಿದವರು) –

47 (33) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ಹಾಸ್ಟೆಲ್ ಹೀಗೆ ಜಾತಿ ಹೆಸರಿನಲ್ಲಿ ಹಾಸ್ಟೆಲ್‌ಗಳನ್ನು ನಿರ್ಮಾಣ ಮಾಡಿದ್ದು ಸರ್ಕಾರದಿಂದಲೇ ಸಮಾಜಕ್ಕೆ ವ್ಯತಿರಿಕ್ತ ಸಂದೇಶ ಕಳುಹಿಸಿದಂತಾಗುತ್ತದೆಂದು ಭಾವಿಸಿ ಸರ್ಕಾರವು ತಾಲ್ಲೂಕಿಗೆ ಒಂದು ಜನರಲ್ ಹಾಸ್ಟೆಲ್ ಸ್ಥಾಪಿಸಲಾಗುವುದೆಂದು ವರದಿಯಾಗಿದ್ದು ನಿಜವೇ;

(ಆ) ಹಾಗಿದ್ದಲ್ಲಿ, ಈ ಹಾಸ್ಟೆಲ್‌ಗಳ ನಿರ್ವಹಣೆಯ ಜವಾಬ್ದಾರಿ ಯಾರಿಗೆ ಇರುತ್ತದೆ;

(ಇ) ಈ ಹಾಸ್ಟೆಲ್‌ಗಳ ಪ್ರವೇಶಾತಿಗಾಗಿ ಅನುಸರಿಸುವ ಮಾನದಂಡಗಳೇನು; ಯಾವ ಆಧಾರದ ಮೇಲೆ ಮತ್ತು ಎಷ್ಟು ಜಾತಿ ಜನರಿಗೆ ಪ್ರವೇಶಾತಿಯನ್ನು ನೀಡಲಾಗುವುದು? (ವಿವರ ನೀಡುವುದು)